(75)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜೇಗೌಡ ಇವರು ನಿಯಮ 330ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-**

*****

**ಪ್ರಶ್ನೆ:** ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ಚೋಳಪ್ಪನಹಳ್ಳಿ ಗ್ರಾಮದ ಹಳೆ ಸರ್ವೆ ನಂ: 80 ರಲ್ಲಿನ ಭಾಗವಾದ ಹೊಸ ಸರ್ವೆ ನಂ: 118 ಹಾಗೂ 111 ಗಳನ್ನು ಬಿ.ಎಂ.ಆರ್.ಡಿ.ಎ ನಿಂದ ವಸತಿ ಉದ್ದೇಶಕ್ಕಾಗಿ ನಿಗದಿಪಡಿಸಲಾಗಿರುವ ಹಾಗೂ ಬಿ.ಎಂ.ಆರ್.ಡಿ.ಎ ನಕ್ಷೆಯ ಪ್ರಕಾರ ಚಿಂತಾಮಣಿ ಮುಖ್ಯ ರಸ್ತೆಯಿಂದ ಪಿಲ್ಲಂಗುಂಪಿ ಕೈಗಾರಿಕಾ ಪ್ರದೇಶದ ಕಾಂಪೌಂಡು ಪಕ್ಕದಲ್ಲಿ 60 ಅಡಿ ರಸ್ತೆಯನ್ನು ನಿಗದಿಪಡಿಸಲಾಗಿರುವ ಜಾಗದ ಜೊತೆಗೆ ಪಕ್ಕದ ಸರ್ಕಾರಿ ಜಮೀನು ಮತ್ತು ಎಸ್.ಸಿ/ಎಸ್.ಟಿ ಜನರ ಜಮೀನು ಭಾಗವನ್ನು ಒತ್ತುವರಿ ಮಾಡಿಕೊಂಡು ಕೈಗಾರಿಕೆಯನ್ನು ಸ್ಥಾಪನೆ ಮಾಡುವ ಮೂಲಕ ಕೈಗಾರಿಕಾ ಸ್ಥಾಪನೆಯ ಸರ್ಕಾರಿ ನಿಯಮಗಳನ್ನು ಪಾಲಿಸದೆ ಇರುವ ಹಾಗೂ ಈ ವಿಷಯವಾಗಿ ಹೊಸಕೋಟೆಯ ಕೈಗಾರಿಕೆಯ ಉಪ ನಿರ್ದೇಶಕರಿಗೆ ಬಂದಿರುವ ದೂರಿನ ಕುರಿತು ಯಾವುದೇ ಕ್ರಮ ತೆಗೆದುಕೊಳ್ಳದೆ ಇರುವ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:** **ಮೆ||** ಮೆಥೆಡ್ಸ್ ಪ್ರೈವೇಟ್ (ಇಂಡಿಯಾ) ಲಿಮಿಟೆಡ್ ಕಾರ್ಖಾನೆಗೆ 1982 ರಲ್ಲಿ ಕರ್ನಾಟಕ ಪ್ರಾದೇಶಾಭಿವೃದ್ಧಿಯಿಂದ 12114.02 ಸ್ಕ್ವೈರ್ ಮೀಟರ್ ಜಮೀನು ಅಲಾಟ್ ಮಾಡಲಾಗಿದೆ. ಸದರಿ ಕಾರ್ಖಾನೆಗೆ 1986 ರಲ್ಲಿ ಆವರಣದ ಮತ್ತು ಯಂತ್ರಗಳ ಸಂಬಂಧ ಮತ್ತು ಉತ್ಪಾದನೆಗೆ ನಕ್ಷಾನುಮೋದನೆ ಮತ್ತು ಲೈಸನ್ಸ್ ನೀಡಲಾಗಿದೆ, ಲೈಸನ್ಸ್ ಸಂಖ್ಯೆ: ಎಂವೈಬಿ-6630 ಆಗಿರುತ್ತದೆ. ಕಾರ್ಖಾನೆಯವರು ಪ್ಲಾಟ್ ನಂ:5/ಬಿ ಅನ್ನು ಬೇರೆ ಕಾರ್ಖಾನೆಯ ಆಡಳಿತ ವರ್ಗದವರಿಂದ ಆವರಣವನ್ನು ಲೀಸ್ ಗೆ ಪಡೆದು ಸದರಿ ಕಾರ್ಖಾನೆಗೆ 2010 ಮತ್ತು 2011 ರಲ್ಲಿ ನಕ್ಷಾನುಮೋದನೆಯನ್ನು ಇಲಾಖೆಯಿಂದ ಪಡೆದಿರುತ್ತಾರೆ.

ವಿಧಾನಸೌಧ ನೌಕರರ ಕ್ಷೇಮಾಭಿವೃದ್ಧಿ ಸಂಘದವರು ಸಂಘಕ್ಕೆ ಸಂಬಂಧಿಸಿದ ಜಮೀನಿನಲ್ಲಿ ಹಾಗೂ ಸ್ಥಳೀಯ ದಲಿತ ವರ್ಗದವರ ಕೃಷಿ ಜಮೀನನ್ನು ಬಲವಂತವಾಗಿ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ದಿನಾಂಕ: 05-12-2023 ರಂದು ಸದರಿ ಕಾರ್ಖಾನೆಯ ಮೇಲೆ ದೂರನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಈ ಸಂಬಂಧ ಕಾರ್ಖಾನೆಗೆ ದಿನಾಂಕ:08-12-2023 ರಂದು ಭೇಟಿ ನೀಡಿ ಸದರಿ ಕಾರ್ಖಾನೆಗೆ 28 ವರ್ಷಗಳ ಹಿಂದೆ ಮೂಲ ನಕ್ಷಾನುಮೋದನೆ ಮಾಡಿದ್ದು 30 ವರ್ಷದ ಮೇಲಿನ ದಾಖಲಾತಿಗಳನ್ನು ಇಲಾಖೆಯಲ್ಲಿ ನಿರ್ವಹಿಸಿರುವುದಿಲ್ಲ. ಆದುದರಿಂದ ನಕ್ಷಾನುಮೋದನೆ ಮೂಲ ಪ್ರತಿ, ಕಾರ್ಖಾನೆಯ ಆವರಣದ ಸೇಲ್ ಡೀಡ್ ಪ್ರತಿ ಸಲ್ಲಿಸಲು ಮತ್ತು ಪ್ರಸ್ತುತ ಆವರಣದ ನಕ್ಷೆಯ ಪ್ರತಿ ತಯಾರಿಸಿ ಸಲ್ಲಿಸಲು ತಿಳಿಸಲಾಗಿತ್ತು ಮತ್ತು ಈ ಕಛೇರಿಯಿಂದ ದಿನಾಂಕ:12-12-2023, 31-01-2024, 22-02-2024 ಮತ್ತು 19-05-2024 ರಂದು ಒಟ್ಟು 04 ಪತ್ರಗಳನ್ನು ಬರೆಯಲಾಗಿದೆ. ಇದಕ್ಕೆ ಉತ್ತರವಾಗಿ ಸದರಿ ಕಾರ್ಖಾನೆಯವರು ಕರ್ನಾಟಕ ಪ್ರಾದೇಶಾಭಿವೃದ್ಧಿಯಿಂದ ಪಡೆದ ಸೇಲ್ ಡೀಡ್ ಮತ್ತು 01 ಎಕರೆ 18 ಗುಂಟೆಗೆ ಸಂಬಂಧಿಸಿದಂತೆ ಸೇಲ್ ಡೀಡ್ ಪ್ರತಿಯನ್ನು ಸಲ್ಲಿಸಿರುತ್ತಾರೆ. ಆದರೆ ಕಾರ್ಖಾನೆಯ ನಕ್ಷಾನುಮೋದನೆಯ ಮೂಲ ಪ್ರತಿ ಮತ್ತು ಪ್ರಸ್ತುತ ಆವರಣದ ನಕ್ಷೆಗಳನ್ನು ಸಲ್ಲಿಸಿರುವುದಿಲ್ಲ. ಸದರಿ ಸೇಲ್ ಡೀಡ್ ಪ್ರತಿಗಳನ್ನು ಪರಿಶೀಲಿಸಲಾಗಿ ಪ್ಲಾಟ್ ನಂ:5/ಎ ಚೊಕ್ಕ ಹಳ್ಳಿ ವಿಲೇಜ್, ಕೆ.ಐ.ಎ.ಡಿ.ಬಿ ಪ್ರದೇಶದ ಆವರಣದ ಒಟ್ಟು ವಿಸ್ತೀರ್ಣ 12114.02 ಸ್ಕ್ವೈರ್ ಮೀಟರ್ ಆಡಳಿತವರ್ಗದವರಿಗೆ ಅಲಾಟ್ ಮೆಂಟ್ ಆಗಿ ಮಾರಾಟದ ಸೇಲ್ ಡೀಡ್ ಆಗಿರುತ್ತದೆ. ಇನ್ನೊಂದು ಸೇಲ್ ಡೀಡ್ ಪರಿಶೀಲಿಸಲಾಗಿ ಆಡಳಿತವರ್ಗದವರು ಒಂದು ಎಕರೆ 08 ಗುಂಟೆಯನ್ನು ದಿನಾಂಕ: 24-02-2023 ರಂದು ಶ್ರೀ. ಹೆಚ್.ಎಸ್.ಪ್ರದೀಪ್ ಬಾಬು, ಎಂಬುವವರಿಂದ ಕೃಷಿ ಜಮೀನು ಖರೀದಿಸಿರುತ್ತಾರೆ.

ಇಲಾಖೆಯಿಂದ ಕೃಷಿ ಜಮೀನಿಗೆ ನಕ್ಷಾನುಮೋದನೆ ನೀಡುವುದಿಲ್ಲ. ನಕ್ಷಾನುಮೋದನೆ ನೀಡಬೇಕಾದರೆ ಕೃಷಿ ಜಮೀನನ್ನು ಕೃಷೀಯೇತರ ಜಮೀನಾಗಿ ಪರಿವರ್ತಿಸಿದರೆ ಮಾತ್ರ ನಕ್ಷಾನುಮೋದನೆ ಇಲಾಖೆಯಿಂದ ಅನುಮೋದನೆ ನೀಡಬಹುದು ಮತ್ತು ಮುಂದುವರೆದಂತೆ ಸರ್ವೆ ಇಲಾಖೆಯು ತಿಳಿಸಿರುವಂತೆ ಸರ್ವೆ ಸಂ: 112 ರಲ್ಲಿ 11 ಗುಂಟೆ ಮತ್ತು ಸರ್ವೆ ನಂ: 113ರ 5 1/2 ಗುಂಟೆ ಜಮೀನು ಕೃಷಿ ಜಮೀನಾಗಿರುವುದರಿಂದ ಈ ಇಲಾಖೆಯಿಂದ ನಕ್ಷಾನುಮೋದನೆ ನೀಡುವುದಿಲ್ಲ. ಮುಂದುವರೆದಂತೆ ಮೇಲೆ ತಿಳಿಸಿರುವ ಜಮೀನುಗಳಿಗೆ ಆಡಳಿತವರ್ಗದವರು ಅರ್ಜಿ ಸಲ್ಲಿಸಿರುವುದಿಲ್ಲ.

ಸಂಘವು ತಿಳಿಸಿರುವ ಒತ್ತುವರಿ ಜಮೀನು ಪರಿಶೀಲನೆಗೆ ಸಂಬಂಧಿಸಿದಂತೆ ಪರಿವೀಕ್ಷಣಾ ಸಮಯದಲ್ಲಿ ಆವರಣದ ಅಳತೆ ಮಾಡಿಸಿ ನಕ್ಷೆಗಳ ಪ್ರತಿಯನ್ನು ಸಲ್ಲಿಸಲು ಹಲವಾರು ಭಾರಿ ಅಳತೆ ಮಾಡಲು ತಿಳಿಸಲಾಗಿರುತ್ತದೆ ಮತ್ತು ದಿನಾಂಕ:16-05-2024 ರಂದು ಪತ್ರವನ್ನು ಬರೆದು ನಕ್ಷಾನುಮೋದನೆ ಮೂಲ ಪ್ರತಿ ಮತ್ತು ಪ್ರಸ್ತುತ ಆವರಣದ ಬಗ್ಗೆ ಅಳತೆ ಮಾಡಿ ನಕ್ಷೆಗಳ ಪ್ರತಿಯನ್ನು ಸಲ್ಲಿಸಲು ಸೂಚಿಸಲಾಗಿರುತ್ತದ. ಆದರೆ, ಸದರಿ ಕಾರ್ಖಾನೆಯವರು ಸಲ್ಲಿಸಿರುವುದಿಲ್ಲ. ಇದರಿಂದ ಆವರಣದ ಅಳತೆಯ/ವಿಸ್ತೀರ್ಣ ಇಲಾಖೆಗೆ ತಿಳಿದಿರುವುದಿಲ್ಲ. ಇಲಾಖೆಯಿಂದ ಆವರಣದ ಅಳತೆ ಮಾಡಿಸುವ ಅವಕಾಶ ಇರುವುದಿಲ್ಲ. ಆಡಳಿತವರ್ಗದವರು ಅಳತೆ ಮಾಡಿ ಸಲ್ಲಿಸಬೇಕಾಗಿರುತ್ತದೆ. ಇದರಿಂದ ಅಭಿಪ್ರಾಯ ನೀಡಲು ಸಾದ್ಯವಾಗಿರುವುದಿಲ್ಲ.

ಇಲಾಖೆಯಲ್ಲಿ 2021 ರಿಂದ ಸ್ವಯಂ ಚಾಲಿತ ನವೀಕರಣ ಪದ್ಧತಿ ಇದ್ದು, ಆಢಳಿತವರ್ಗದವರು ಸ್ವಯಂ ಚಾಲಿತವಾಗಿ ನವೀಕರಣ ಮಾಡಿಕೊಂಡಿರುತ್ತಾರೆ. ನಕ್ಷಾನುಮೋದನೆ ನಂತರ ನವೀಕರಣ ಪದ್ಧತಿ ಇಲಾಖೆಯಲ್ಲಿ ಇರುವುದಿಲ್ಲ. ಇದರಿಂದ ಒತ್ತುವರಿಯಾಗಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಒತ್ತುವರಿಯಾಗಿರುವ ಜಮೀನನ್ನು ತೆರವುಗೊಳಿಸುವ ಅಧಿಕಾರ ಈ ಇಲಾಖೆಯ ಕಾರ್ಯ ವ್ಯಾಪ್ತಿಗೆ ಒಳಪಡುವುದಿಲ್ಲ. ಸರ್ವೆ, ಕೆ.ಐ.ಎ.ಡಿ.ಬಿ, ಪೊಲೀಸ್ ಮತ್ತು ಕಂದಾಯ ಇಲಾಖೆಗಳ ವ್ಯಾಪ್ತಿಗೆ ಒಳಪಡುತ್ತದೆ.

ಈ ಮೇಲಿನ ಅಂಶಗಳನ್ವಯ ಸಂಘವು ಕೋರಿರುವ ಅಂಶವು ಪ್ರಗತಿಯಲ್ಲಿರುವುದರಿಂದ ಈ ದೂರಿಗೆ ಸಂಬಂಧಿಸಿದಂತೆ ಮೇಲಿನಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮುಂದೆಯೂ ಸಹ ಕ್ರಮಗಳನ್ನು ತೆಗೆದುಕೊಂಡು ಆವರಣದ ಅಳತೆಯನ್ನು ಪಡೆದು ಒತ್ತುವರಿ ಸಂಬಂಧ ವಿಧಾನಸೌಧ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಇಲಾಖೆಯ ಅಭಿಪ್ರಾಯ/ ಮಾಹಿತಿ ನೀಡಲಾಗುವುದು. ಆಡಳಿತವರ್ಗದವರು ಮಾಹಿತಿಯನ್ನು ನೀಡದಿರುವ ಬಗ್ಗೆ ನೋಟಿಸ್ ಜಾರಿ ಮಾಡಿದ್ದು, ಕಾರ್ಖಾನೆಯ ಆಡಳಿತವರ್ಗದವರು ಒಂದು ಪಕ್ಷ ಸಲ್ಲಿಸದಿದ್ದಲ್ಲಿ ಮಾಹಿತಿ ನೀಡದಿರುವ ಬಗ್ಗೆ ಮತ್ತು ಇನ್ನಿತರ ಅಂಶಗಳಿಗೆ ಈ ಕಛೇರಿಯಿಂದ ಕ್ರಮ ತೆಗೆದುಕೊಳ್ಳಲಾಗುವುದು.

ಸಂಘವು ನೀಡಿರುವ ದೂರಿನ ಅಂಶಗಳ ಬಗ್ಗೆ ಆಡಳಿತವರ್ಗದವರಿಂದ ಕೆಲವು ದಾಖಲಾತಿಗಳನ್ನು ಸಲ್ಲಿಸಲು ಪತ್ರಗಳನ್ನು ಬರೆದಿದ್ದು,. ದಾಖಲೆಗಳನ್ನು ಸ್ವೀಕರಿಸಿದ ನಂತರ ಪರಿಶೀಲಿಸಿ, ಸಂಘಕ್ಕೆ ಇಲಾಖೆಯ ಅಭಿಪ್ರಾಯವನ್ನು ನೀಡಲಾಗುವುದು.

**ಕಾಇ 77 ಕಾಬಾನಿ 2024**

**(ಸಂತೋಷ್ ಎಸ್.ಲಾಡ್ )**
**ಕಾರ್ಮಿಕ ಸಚಿವರು**